ಓಡಿಹೋದಳು. ಅಲ್ಲಿಗೆ ಆಟ ಮುಗಿಸಿ ಅಲ್ಲಿದ್ದ ಹುಡುಗರೆಲ್ಲ ಹೊರಟರು.

ಒಂದೆರಡು ದಿನ ರಾಧಾ ದಿನ ಬರುವಂತೆ ಚಹಾ ಹಾಕಿಸಿಕೊಳ್ಳಲು ಬರಲಿಲ್ಲ. ಮೂರನೇ ದಿನ ಬಂದಳು. ಬಂದವಳೇ ಸೀದಾ ರಾಮಚಂದ್ರನ ಅಕ್ಕನಲ್ಲಿಗೆ ಹೋದಳು. ರಾಮಚಂದ್ರನ ಅಕ್ಕನಿಗೆ ಮಿಷನ್ ಹೊಲಿಯುವುದಕ್ಕೆ ಬರುತ್ತಿತ್ತು. 'ತಾನು ಮಿಷನ್ ಕಲಿಯುತ್ತೇನೆ ಅಕ್ಕ' ಅಂತ ದಿನ ಸಾಯಂಕಾಲ ಬರತೊಡಗಿದಳು. ರಾಮಚಂದ್ರನ ನೋಡಿದಾಗಲೆಲ್ಲಾ ಮುಖ ಕೆಳಗೆ ಹಾಕುತ್ತ ನಡೆಯತೊಡಗಿದಳು. ಒಮ್ಮೊಮ್ಮೆ ರಾತ್ರಿಹೊತ್ತು ರಾಮಚಂದ್ರನ ಮನೆಯಲ್ಲೇ ಅವನ ಅಕ್ಕನ ಜೊತೆಯಲ್ಲಿ ಮಲಗಿಕೊಳ್ಳುವುದಕ್ಕೆ ಬರುತ್ತಿದ್ದಳು. ಒಂದು ರಾತ್ರಿ ರಾಮಚಂದ್ರನ ಅಕ್ಕನ ಪಕ್ಕದಲ್ಲಿ ರಾಧಾ ವಟವಟಗುಟ್ಟುತ್ತಾ ಮಾತನಾಡುತ್ತ ಇದ್ದಳು. ರಾಮಚಂದ್ರ ಮೆಲ್ಲನೆ ಬಲಗಣ್ಣು ಮುಚ್ಚಿ ಕಣ್ಣು ಹೊಡೆದ, ಆಗಷ್ಟೇ ಬರುತ್ತಿದ್ದ ಹಾಲುಮೀಸೆ ಮೇಲೆ ಕೈಇಟ್ಟು ತಿರುವಿದ. ಅವಳು ಮದುವಣಗಿತ್ತಿಯಂತೆ ನಾಚಿದಳು. ಸರಿರಾತ್ರಿಯಲ್ಲಿ ಧೈರ್ಯ ಮಾಡಿ ಮೆಲ್ಲಗೆ ರಾಧಾಳ ಪಕ್ಕ ಹೋದ. ಅವಳಿನ್ನೂ ತನ್ನ ಬಟ್ಟಲು ಕಣ್ಣು ತೆರೆದೇ ಇದ್ದಳು. ಅವಳ ಕುಪ್ಪಸದಲ್ಲಿ ಕೈಹಾಕಿ ಮುತ್ತಿನ ಮಳೆಸುರಿಸತೊಡಗಿದ. ಬೆಳಿಗ್ಗೆ ಎದ್ದರೆ ಅವಳಿರಲಿಲ್ಲ.

ರಾಮಚಂದ್ರ ಹಲ್ಲು ತಿಕ್ಕುತ್ತಾ ಮೆಲ್ಲಗೆ ಅವಳ ಮನೆಯ ಸುತ್ತಾ ಓಡಾಡಿದ. ಕಸದ ಪುಟ್ಟಿಯನ್ನು ತಲೆಮೇಲೆ ಹೊತ್ತುಕಂಡು ಹೊರಬಂದವಳು ರಾಮಚಂದ್ರನನ್ನು ನೋಡಿ ನಾಚುತ್ತಾ ಹೋದಳು. ರಾಮಚಂದ್ರನಿಗೆ ಹೋದ ಜೀವ ಮತ್ತೆ ಬಂದಾಗಾಯಿತು. ಅದಾದ ಮೇಲೆ ಇಬ್ಬರೂ ಗುಟ್ಟಾಗಿ ರಾತ್ರಿಯ ಹೊತ್ತು ಶಾಲೆಯ ಹಿಂದುಗಡೆ ಸೇರುತ್ತಿದ್ದರು. ಸುಮಾರು ಒಂದು ತಾಸು ಅದು ಇದು ಮಾತಾಡುತ್ತ ಅವಳನ್ನು ತಬ್ಬಿ ಮುದ್ದಾಡುತ್ತ ಪ್ರೀತಿ ಮಾಡುತ್ತಿದ್ದ. ದಿನಾಲು ಸಾಯಂಕಾಲದವರೆಗೂ ಅವಳ ತಮ್ಮನ ಜೊತೆ ಕುರಿ ಆಡು ಹೊಡೆದುಕೊಂಡು ಮೇಯಿಸಿಕೊಂಡು ಬರಲು ಹೋಗುತ್ತಿದ್ದಳು. ರಾಮಚಂದ್ರ ಶಾಲೆಯಲ್ಲಿ ಅವಳ ಬಗ್ಗೆ ಹಗಲುಗನಸು ಕಾಣುತ್ತಾ ಸಾಯಂಕಾಲವಾಗುವುದನ್ನೇ ಕಾಯುತ್ತಿದ್ದ. ರಾತ್ರಿ ಎಂದಿನಂತೆ ಶಾಲೆಯ ಹಿಂಭಾಗದಲ್ಲಿ ಇಬ್ಬರು ಪ್ರೀತಿ ಮಾಡಿ ಮನೆಗೆ ಹೋಗುತ್ತಿದ್ದರು. ದಿನಗಳು ಹಾಗೆ ಗತಿಸಿಹೋದವು.

ರಾಮಚಂದ್ರ ಹೈಸ್ಕೂಲ್ ಮುಗಿದು ಕಾಲೇಜ್ ಓದಲು ಪಟ್ಟಣಕ್ಕೆ ಹೊರಟು ನಿಂತ. ತಾನು ಪಟ್ಟಣಕ್ಕೆ ಹೊರಟುನಿಂತ ರಾತ್ರಿ ಇಬ್ಬರೂ ಹುಣ್ಣಿಮೆಯ ಆ ಬೆಳದಿಂಗಳಿನಲ್ಲಿ ಮತ್ತೆಂದೂ ಸಿಗಲಾರೆವೇನೋ ಎಂಬಂತೆ ಮನಸಾರೆ ಪ್ರೀತಿ ಮಾಡಿದರು. ರಾಮಚಂದ್ರ ಕಾಲೇಜಿಗೆ ಹೋಗಿ ಎರಡು ಮೂರು ತಿಂಗಳಿಗೆ ರಾಮಚಂದ್ರನ ಅಪ್ಪ ಸತ್ತುಹೋದ. ಪ್ರೀತಿಯ ವಿಷಯ ರಾಧಾಳ ಮನೆಯಲ್ಲಿ ಗೊತ್ತಾಗಿ ಆರು ತಿಂಗಳಲ್ಲೇ ಅವಳ ಸೊದರಮಾವನಿಗೆ ಕೊಟ್ಟು ಮದುವೆ ಮಾಡಿ ಗಂಡನ ಮನೆಗೆ ಕಳಿಸಿದ್ದರು. ಅತ್ತ ಪ್ರೀತಿಯ ಅಪ್ಪ, ಈ ಕಡೆ ಜೀವದ ಗೆಳತಿ ಇಬ್ಬರೂ ದೂರವಾದ ಮೇಲೆ ಗುಂಡಿಗೇನ ಗಟ್ಟಿಮಾಡಿಕೊಂಡು, ಇದಾವುದೂ ನಡೆದೇ ಇಲ್ಲವೆನ್ನುವಂತೆ ಕಾಲೇಜಿನಲ್ಲಿ ತಲೆಬಗ್ಗಿಸಿಕೊಂಡು ಓದುತ್ತಾ ಒಳ್ಳೆ ಅಂಕ ತೆಗೆದು ಊರಿಗೆ ಕೀರ್ತಿ ತಂದಿದ್ದ.

ಇದಾದ ವರ್ಷದೊಳಗೆ ರಾಮಚಂದ್ರನಿಗೆ ಇನ್ನೊಂದು ಆಘಾತ ಕಾದಿತ್ತು. ರಾಧಾ ಚೊಚ್ಚಲು ಬಾಣಂತನಕ್ಕೆ ಸೀಮಂತ ಮಾಡಿಸಿಕೊಂಡು ಗಂಡನ ಮನೆಯಿಂದ ತನ್ನ ತವರಿಗೆ ಬರುವಾಗ ಅವರು ಕುಳಿತಿದ್ದ ಗಾಡಿ ಪಲ್ಟಿ ಹೊಡೆದಿತ್ತು. ರಾಧಾಳ ಹೊಟ್ಟೆಗೆ ಬಲವಾದ ಪೆಟ್ಟುಬಿದ್ದು ಸ್ಥಳದಲ್ಲಿಯೇ ಅಸುನೀಗಿದ್ದಳು. ಪ್ರೀತಿಯ ತನ್ನಪ್ಪನ ಸಾವಿನ ನಂತರ ಆದ ರಾಧಾಳ ಸಾವು ಅವನನ್ನು ಜೀವಂತ ಶವವನ್ನಾಗಿ ಮಾಡಿತ್ತು

***

ತಾನು ತಂಗಿದ್ದ ಹೋಟೆಲಿನಲ್ಲಿ ತನ್ನ ರೂಮಿಗೆ ರಾತ್ರಿ ಊಟಕ್ಕೆ ಆರ್ಡರ್ ಮಾಡಿದ್ದ. ಊಟ ಬಂದು ಬಹಳ ಹೊತ್ತಾದರೂ ಒಂದು ತುತ್ತೂ ತಿನ್ನದೆ ಹಾಗೇ ಅದನ್ನು ದಿಟ್ಟಿಸುತ್ತ ಕುಳಿತ. ಬೇಜಾರಾಗಿ ಫೇಸ್‌ಬುಕ್ಕು ನೋಡತೊಡಗಿದ. ಗೆಳೆಯರೊಬ್ಬರ ಮದುವೆ ವಾರ್ಷಿಕೋತ್ಸವದ ಫೋಟೊ, ಮತ್ಯಾರೋ ಗೆಳೆಯರ ಹುಟ್ಟುಹಬ್ಬ, ಇನ್ನಾರದೋ ಎಂತಹದೋ ವಿಡಿಯೊ, ತಮ್ಮ ಹೊಸ ಪುಸ್ತಕ ಬರುತ್ತಿರುವುದರ ಬಗ್ಗೆ ತರುಣ ಗೆಳೆಯನೊಬ್ಬ ಪುಸ್ತಕ ಕೊಳ್ಳುವುದಕ್ಕಾಗಿ ಮಾಡಿದ